ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE : 9-12-2020

# ಶಾಸಕರ ಹಾಜರಾತಿಗೆ ಕಟ್ಟುನಿಟ್ಟಿನ ಆದೇಶ ಅವಶ್ಯ

ಸರ್ಕಾರ ವಿಧಾನಮಂಡಳ ಅಧಿವೇಶನ ಕರೆಯಬೇಕು; ಹಲವಾರು ಮಹತ್ವದ ವಿಷಯಗಳ ಚರ್ಚೆಯಾಗಬೇಕಿದೆ ಎಂದು ಶಾಸಕರು ಹೇಳುವುದು ಸಾಮಾನ್ಯ. ಆದರೆ ಈಗ ಅಧಿವೇಶನ ಪ್ರಾರಂಭವಾಗಿ ಎರಡು ದಿನವಾದರೂ ಅನೇಕ ಶಾಸಕರು ಅಧಿವೇಶನಕ್ಕೆ ಬಂದಿಲ್ಲ. ಹೀಗೆ ಗೈರಾದವರಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳೆರಡಕ್ಕೂ ಸೇರಿದವರಿದ್ದಾರೆ. ಇದು ಬೇಸರದ ಸಂಗತಿ. ಹಾಗಾದರೆ ಅಧಿವೇಶನ ನಡೆಸಬೇಕು ಎಂದು ಇವರು ಒತ್ತಾಯಿಸುವುದಾದರೂ ಯಾವ ಪುರುಷಾರ್ಥಕ್ಕಾಗಿ? ಈ ರೀತಿ ನಿರ್ಲಕ್ಷ್ಯ ತೋರುವುದಾದಲ್ಲಿ ಸಾರ್ವಜನಿಕರ ಹಣದಲ್ಲಿ

ಜನಮತ

ಕೋಟ್ಯಂತರ ರೂ. ಖರ್ಚು ಮಾಡಿ ಅಧಿವೇಶನ ನಡೆಸುವ ಅವಶ್ಯಕತೆ ಯಾ ಏನು? ಜನಸಾಮಾನ್ಯರ ಸಮಸ್ಯೆಗಳ ಬಗ್ಗೆ ಮತ್ತು ಜ್ವಲಂತ ವಿಚಾರಗಳ ಅರ್ಥಪೂರ್ಣ ಚರ್ಚೆಯಾಗಿ, ಉತ್ತಮ ನಿರ್ಣಯ ಹೊರಹೊಮ್ಮಿ ಅಧಿವೇಶನಕ್ಕೆ ಸಾರ್ಥಕತೆ. ಆದ್ದರಿಂದ ಸರ್ಕಾರ ಮತ್ತು ಉಭಯ ಸದನ ಮುಖ್ಯಸ್ಥರು ಶಾಸಕರ ಹಾಜರಾತಿಗೆ ಬಿಗಿ ಕ್ರಮ ಕೈಗೊಳ್ಳುವುದು ಅವಶ್ಯ.

| ವಿ.ಜಿ. ಇನಾಮದಾರ ಸಾರವಾ